ಓ.ಎಸ್. ನಂ.129/2022
ಪಿ. ಡಬ್ಲ್ಯೂ - 2

<u>ದಿನಾಂಕಃ **21-07-2025**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 3 ರಿಂದ 5 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಎಸ್.ಬಿ.ಪಿ. ರವರಿಂದ

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ 56 ವಯಸ್ಸು ಇರುತ್ತದೆ. ಈ ದಾವೆಯನ್ನು ಶಾರದ ರವರು ಶರಣಪ್ಪನ ವಿರುದ್ಧ ಸಲ್ಲಿಸಿರುತ್ತಾರೆ. ಸರ್ವೆ ನಂಃ 601 ರ ಕುರಿತು ದಾವೆಯನ್ನು ಶಾರದ ರವರು ಶರಣಪ್ಪನ ವಿರುದ್ಧ ಸಲ್ಲಿಸಿರುತ್ತಾರೆ. ಸರ್ವೆ ನಂಃ 601 ರಲ್ಲಿ 9 ಎಕರೆ ಚಿಲ್ಲರೆ ಜಮೀನು ಇರುತ್ತದೆ. 9 ಎಕರೆ ಚಿಲ್ಲರೆ ಜಮೀನು ಅಖಂಡ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ತುಕಡಿಗಳು ಆಗಿರುವುದಿಲ್ಲ. ನಾನು ದಿನಾಲು ದಾವಾ ಆಸ್ತಿಯನ್ನು ನೋಡುತ್ತಿದ್ದೇನೆ. ನನ್ನ ಜಮೀನಿನ ಸರ್ವೆ ನಂಃ 156 ಇರುತ್ತದೆ. ಸದರಿ ಜಮೀನಿನಲ್ಲಿ 10 ಎಕರೆ ಜಮೀನು ಇರುತ್ತದೆ. ನಾವು 5 ಜನ ಅಣ್ಣತಮ್ಮಂದಿರು ಇರುತ್ತೇವೆ ಪ್ರತಿಯೊಬ್ಬರಿಗೂ 2 ಎಕರೆ ಜಮೀನು ಪಾಲಿಗೆ ಬರುತ್ತದೆ. ದಾವಾ ಆಸ್ತಿಯು ಶರಣಪ್ಪನ ಹೆಸರಿನಲ್ಲಿ ಇರುತ್ತದೆ. ಶರಣಪ್ಪನ ಹೆಸರಿನಲ್ಲಿ ದಾವಾ ಆಸ್ತಿ ಇರುತ್ತದೆ ಎಂದು ನೀವು ಹೇಗೆ ಹೇಳುತ್ತೀರಿ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಆತನ ಹೆಸರಿನಲ್ಲಿ ಇರುತ್ತದೆ ಎಂದು ಸಾರ್ವಜನಿಕರು ಹೇಳುತ್ತಿದ್ದರು.

1 ನೇ ಪ್ರತಿವಾದಿಯ ತಂದೆಯ ಹೆಸರು ಯಕೋಬ ಇರುತ್ತದೆ ಆತನಿಗೆ 2 ಜನ ಗಂಡು ಮಕ್ಕಳು ಇರುತ್ತಾರೆ ಅವರ ಹೆಸರುಗಳು ಶರಣಪ್ಪ ಮತ್ತು ಮೋನಪ್ಪ ಇರುತ್ತವೆ. ಕಳೆದ 7-8 ವರ್ಷಗಳ ಹಿಂದೆ ಮೋನಪ್ಪ ಮೃತಪಟ್ಟಿರುತ್ತಾನೆ. ಮೋನಪ್ಪನಿಗೆ ಮಕ್ಕಳು ಇರುವುದಿಲ್ಲ ಹಾಗೂ ಆತನ ಹೆಂಡತಿಯು ಸಹ ಮೃತಪಟ್ಟಿರುತ್ತಾಳೆ. ಮೋನಪ್ಪನು ತಾನು ಜೀವಂತ ಇದ್ದಾಗ ಆತನ ಭಾಗದ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತಾಯಿ ಜೀವಂತ ಇದ್ದಾರೆ ಅವರ ಹೆಸರು ಮುತ್ತಮ್ಮ ಇರುತ್ತದೆ. ಮುತ್ತಮ್ಮ ರಳನ್ನು ನಾನು ನೋಡಿರುತ್ತೇನೆ ಅವಳು ಜೀವಂತ ಇರುತ್ತಾರೆ. ವಾದಿಯರ ಮನೆತನವನ್ನು ಯಾರು ನಡೆಸುತ್ತಾರೆ ಎಂದರೆ ಸಾಕ್ಷಿಯು ಮುತ್ತಮ್ಮ ಮತ್ತು ವಾದಿಯರು ನಡೆಸುತ್ತಾರೆ ಎಂದು

ಹೇಳುತ್ತಾರೆ. ವಾದಿಯರ ಕುಟುಂಬಕ್ಕೆ ದಾವಾ ಜಮೀನನ್ನು ಬಿಟ್ಟು ಬೇರೆ ಜಮೀನು ಇರುವುದಿಲ್ಲ. ವಾದಿಯರ ಮನೆತನಕ್ಕೆ ದಾವಾ ಜಮೀನಿನಲ್ಲಿ ಬರುತಕ್ಕಂತ ಆದಾಯವನ್ನು ಬಿಟ್ಟು ಬೇರೆ ಆದಾಯ ಅವರಿಗೆ ಇರುವುದಿಲ್ಲ.

1 ನೇ ಪ್ರತಿವಾದಿಯ ಮಕ್ಕಳಿಗೆ ಆತನೇ ಖರ್ಚು ಮಾಡಿ ಶಿಕ್ಷಣವನ್ನು ಕೋಡಿಸಿರುತ್ತಾನೆ ಎಂದರೆ ಸಾಕ್ಷಿಯು ಆತನ ತಾಯಿ ಮತ್ತು ವಾದಿಯರು ಖರ್ಚು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಅದೇ ರೀತಿ 1 ನೇ ಪ್ರತಿವಾದಿಯ ಆತನ ಮಕ್ಕಳ ಮದುವೆಯನ್ನು ಮಾಡಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳ ಮದುವೆಯನ್ನು ಆತನ ತಾಯಿ ಮತ್ತು ಹೆಂಡತಿ ಕೂಡಿ ಮದುವೆಯನ್ನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಕಳೆದ 5-6 ವರ್ಷಗಳ ಹಿಂದೆ 1 ನೇ ಪ್ರತಿವಾದಿಯ ಹೆಂಡತಿಯು ಮೃತಪಟ್ಟಿರುತ್ತಾಳೆ. ದಾವಾ ಜಮೀನಿನ ಮೂಲಕ ಬಂದ ಆದಾಯದ ಮೂಲಕ 1 ನೇ ಪ್ರತಿವಾದಿಯ ತಾಯಿ ಮತ್ತು ಹೆಂಡತಿ ಕೂಡಿ 1 ನೇ ಪ್ರತಿವಾದಿಯ ಮಕ್ಕಳ ಮದುವೆಯನ್ನು ಮಾಡಿದ್ದರು. ದಾವಾ ಜಮೀನಿನಲ್ಲಿ 1 ಮತ್ತು 2 ನೇ ಪ್ರತಿವಾದಿಯರಿಗೆ ತಲಾ ಅರ್ಧ ಭಾಗ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೇರೆ ಆಗಿರುವುದಿಲ್ಲ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಯಾವುದೇ ದುಷ್ಚಟಗಳನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಜೊತೆಗೆ ಕುಡಿಯಲು ಹೋಗಿರುವುದಿಲ್ಲ. 1 ನೇ ಪ್ರತಿವಾದಿಯು ತನ್ನ ಕುಟುಂಬದ ಆಗುಹೋಗುಗಳನ್ನು ಆತನೇ ನೋಡಿಕೊಳ್ಳುತ್ತಿದ್ದನ್ನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತನ್ನ ಮಕ್ಕಳ ಶಿಕ್ಷಣಕ್ಕೆ ಹಾಗೂ ಮದುವೆಯ ಸಲುವಾಗಿ ಕಳೆದ 20 ವರ್ಷಗಳ ಹಿಂದೆ ದಾವಾದ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಹೌದು ಮಾರಾಟ ಮಾಡಿರುತ್ತಾನೆ ಆದರೆ ಆತನು ತನ್ನ ಮಕ್ಕಳಿಗೆ ಏನು ನೀಡಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು ತೀರಿಗಾಡಿ ಕುಡಿದು ಖರ್ಚು ಮಾಡಿರುತ್ತಾನೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು 1 ಎಕರೆ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ. ಅದೇ ರೀತಿ 5 ನೇ ಪ್ರತಿವಾದಿಗೂ ಸಹ ಆತನು 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ 5 ನೇ ಪ್ರತಿವಾದಿಯು ತನ್ನ 1 ಎಕರೆ ಜಮೀನನ್ನು 6 ನೇ

ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾನೆ. ಅದೇ ರೀತಿ 1 ಮತ್ತು 2 ನೇ ಪ್ರತಿವಾದಿಯರು ಕೂಡಿ 3 ಎಕರೆ ಜಮೀನನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಖರೀದಿ ಪತ್ರದ ಪ್ರಕಾರ 3 ರಿಂದ 7 ನೇ ಪ್ರತಿವಾದಿಯರ ಹೆಸರುಗಳು ದಾವಾದ ಪಹಣಿ ಪತ್ರಿಕೆಗಳಲ್ಲಿ ದಾಖಲು ಆಗಿರುತ್ತವೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾನೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಒಂದು ಗುಂಟೆ ಜಮೀನು ಸಹ ಇರುವುದಿಲ್ಲ ಎಂದರೆ ಸರಿಯಲ್ಲ. 3 ರಿಂದ 7 ನೇ ಪ್ರತಿವಾದಿಯರು ಖರೀದಿ ಮಾಡಿದ ಜಮೀನುಗಳಲ್ಲಿ ಕೃಷಿಯೇತರ ಜಮೀನನ್ನಾಗಿ ಪರಿವರ್ತನೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಅದೇ ರೀತಿ ಸದರಿ ಜಮೀನುಗಳಲ್ಲಿ ಆದ ನಿವೇಶನಗಳನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ನಿವೇಶಗಳಾಗಿರುವುದಿಲ್ಲ ಎಂದು ಹೇಳುತ್ತಾರೆ. ಕಳೆದ 20 ವರ್ಷಗಳಿಂದ ನಾನು ದಾವಾ ಜಮೀನಿಗೆ ಹೋಗಿ ನೋಡಿರುವುದಿಲ್ಲಎಂದರೆ ಸರಿಯಲ್ಲ. ಅದೇ ರೀತಿ ಅಲ್ಲಿ ನಿವೇಶನಗಳು ಇದ್ದರು ಸಹ ನೀನು ಅಲ್ಲಿ ಹೋಗಿ ನೋಡಲಾಗದೇ ನಿವೇಶಗಳು ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆತನದ ಬಗ್ಗೆ ಹಾಗೂ ವ್ಯವಹಾರದ ಬಗ್ಗೆ ನಿಮ್ಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ ಸಾಕ್ಷಿಯು ಮುಂದುವರೆದು ತಾಯಮ್ಮ ದೇವಿ ಗುಡಿಯನ್ನು ಕಟ್ಟಿರುತ್ತಾರೆ ಎಂದು ಹೇಳುತ್ತಾರೆ.  ಕಳೆದ 3 ವರ್ಷಗಳ ಹಿಂದೆ ತಾಯಮ್ಮ ದೇವಿ ಗುಡಿಯನ್ನು ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ಕಳೆದ 3 ವರ್ಷಗಳ ಹಿಂದೆ 1 ನೇ ಪ್ರತಿವಾದಿಯು ಮಾಲೀಕನಾಗಿರಲಿಲ್ಲ ಆದ್ದರಿಂದ ದಾವಾ ಜಮೀನಿನಲ್ಲಿ ಗುಡಿಯನ್ನು ಕಟ್ಟುವ ಪ್ರಸಾಂಗ ಉದಬವಾಗುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ದಾವಾದ ಜಮೀನಿನಲ್ಲಿ ಕಾಲೇಜನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಶ್ರೀ.ವಿ.ಎಸ್ ವಕೀಲರು ಸಾಕ್ಷಿಗೆ ಸುಮ್ಮನೆ ನಿಲ್ಲಬೇಡ ಉತ್ತರ ನೀಡು ಎಂದು ಹೇಳಿದ್ದಾಗ ವಕೀಲರ ಕೋರಿಕೆಯ ಮೇರೆಗೆ ಆತನ್ನು ಕಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ದಾವಾದ ಆಸ್ತಿಯ ಸುತ್ತಮುತ್ತಲು ನನ್ನ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾದ ಜಮೀನಿನ ಪೂರ್ವಕ್ಕೆ ಅಕ್ಕನವರ ಚಂದಪ್ಪ ರವರ ಜಮೀನು ಇರುತ್ತದೆ. ಅಕ್ಕನವರ ಚಂದಪ್ಪರವರ ಜಮೀನಿನ ಸರ್ವೆ ನಂಬರ

ಏನು ಇರುತ್ತದೆ ಎಂದರೆ ಸಾಕ್ಷಿಯು ನಾನು ಹೋಗಿರುವುದಿಲ್ಲ ಹೇಗೆ ಹೇಳಲಿ ಎಂದು ಹೇಳುತ್ತಾರೆ. ದಾವಾದ ಆಸ್ತಿಯ ಪಶ್ಚಿಮಕ್ಕೆ ಚಿತ್ತಾಪುರ ರಸ್ತೆ ಇರುತ್ತದೆ. ಉತ್ತರಕ್ಕೆ ಮ್ಯಾದರ್ ವೆಂಕಟಪ್ಪ ರವರ ಬೀಳು ಜಮೀನು ಇದ್ದೆ. ದಕ್ಷಿಣಕ್ಕೆ ಡಾನ್ ಬೊಸ್ಕೋ ಶಾಲೆ ಇರುತ್ತದೆ. ಪ್ರತಿವಾದಿಯರ ಮನೆತನ ಬಗ್ಗೆ ಹಾಗೂ ಜಮೀನಿನ ಬಗ್ಗೆ ಗೊತ್ತು ಇರದೇ ಇದ್ದರು ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ **6** ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್.ಬಿ.ಎ ರವರಿಂದಃ

3 ರಿಂದ 5 ನೇ ಪ್ರತಿವಾದಿಯರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 6 ನೇ ಪ್ರತಿವಾದಿಯ ಪರ ವಕೀಲರು 6 ನೇ ಪ್ರತಿವಾದಿಯ ಪಾಟೀ ಸವಾಲನ್ನಾಗಿ ಅಳವಡಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ **7** ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ.ಎಸ್.ಪಿ. ರವರಿಂದಃ

3 ರಿಂದ 5 ನೇ ಪ್ರತಿವಾದಿಯರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 7 ನೇ ಪ್ರತಿವಾದಿಯ ಪರ ವಕೀಲರು 7 ನೇ ಪ್ರತಿವಾದಿಯ ಪಾಟೀ ಸವಾಲನ್ನಾಗಿ ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ